ಸ್ಥಳೀಯ ಸಂಸ್ಥೆಗಳಿಂದ ಮಾಲಿನ್ಯ ತಡೆಯಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಮಂಡ್ಯ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನೀಡಿರುವ ಆರ್ಥಿಕ ಸಹಾಯ.

2401(3136)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಿಗಮ ನಿಯಮಿತ ಇವುಗಳಿಂದ ಮಂಡ್ಯ ಜಿಲ್ಲೆಯಲ್ಲಿ ಫಲಾನುಭವಿಗಳಿಗೆ ಆರ್ಥಿಕ ಸಹಾಯ ದೊರಕಿಸಿಕೊಡಲಾಗಿದೆಯೆ;

ಆ) ಹಾಗಿದ್ದಲ್ಲಿ ಕಳೆದ ಸಾಲಿನಲ್ಲಿ ಎಷ್ಟು ಫಲಾನುಭವಿಗಳಿಗೆ ಆರ್ಥಿಕ ಸಹಾಯ ಒದಗಿಸಲಾಗಿದೆ;

ಇ) ಇದರ ವಿವರಗಳೇನು?(ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು):

ಅ) ಹೌದು. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಇವುಗಳಿಂದ ಮಂಡ್ಯ ಜಿಲ್ಲೆಯಲ್ಲಿ ಫಲಾನುಭವಿಗಳಿಗೆ ಆರ್ಥಿಕ ಸಹಾಯ ದೊರಕಿಸಿಕೊಡಲಾಗಿದೆ.

ಆ) 1999-2000ನೇ ಸಾಲಿನಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಮಂಡ್ಯ ಜಿಲ್ಲೆಯ 729 ಹಿಂದುಳಿದ ವರ್ಗಗಳ ಫಲಾನುಭವಿಗಳಿಗೆ ಹಾಗೂ ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ 568 ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಫಲಾನುಭವಿಗಳಿಗೆ ಆರ್ಥಿಕ ಸಹಾಯ ಒದಗಿಸಲಾಗಿದೆ.

ಇ) ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ:

ಕ್ರ.ಸಂ.	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ	
		ಕ.ಹಿಂ.ವ.ಅ.ನಿ	ಕಪಜಾಪವಅನಿ
1)	ಮಂಡ್ಯ	286	194
2)	ಮದ್ದೂರು	155	109
3)	ಶ್ರೀರಂಗಪಟ್ಟಣ	26	30
4)	ಪಾಂಡವಪುರ	43	29
5)	ಕೆ.ಆರ್.ಪೇಟೆ	43	37
6)	ಮಳವಳ್ಳಿ	131	115
7)	ನಾಗಮಂಗಲ	45	54
	ಒಟ್ಟು	729	568

ರಾಜ್ಯದ ನಗರಸಭೆಗಳಲ್ಲಿ ಅಭಿವೃದ್ಧಿ ಶುಲ್ಕ ಪಾವತಿ.

2402(ಸಿಗಸಿಒ)

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ನಗರಸಭೆಗಳಲ್ಲಿ ಅಭಿವೃದ್ಧಿ ಶುಲ್ಕವನ್ನು ಸಾರ್ವಜನಿಕರಿಂದ ನಗರಸಭೆಗಳಿಗೆ ಪಾವತಿ ಮಾಡಿಕೊಳ್ಳಬಾರದೆಂದು ಸರ್ಕಾರವು ಆದೇಶಿಸಿದೆಯೆ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣವೇನು;

ಇ) ಮಂಡ್ಯ ನಗರಸಭೆಗೂ ಈ ಅಭಿವೃದ್ಧಿ ಶುಲ್ಕ ಪಾವತಿ ಮಾಡಿಕೊಳ್ಳಬಾರದೆಂದು ನಿರ್ದಿಷ್ಟ ಖಾತೆದಾರರ ಬಗೆಗೆ ಸೂಚಿಸಲಾಗಿದೆಯೆ;

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು):

ಅ) ಇಲ್ಲ